(ಅತೀ ತುರ್ತು)

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂ:ಸಿಪಿಇ(2)/ಪಾದರಕ್ಷೆ (ಷೂ) ಅನುದಾನ-06/2017-18 ದಿನಾಂಕ:11/10/2017

- ಜ್ಞಾಪನ -

ವಿಷಯ:- 2017-18ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತವಾಗಿ ಒದಗಿಸಲಾಗುತ್ತಿರುವ ಷೂ ಮತ್ತು ಸಾಕ್ಸ್ ಖರೀದಿಯ ನಂತರ ಉಳಿಕೆಯಾಗಿರುವ ಅನುದಾನವನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ:- 1. ಷೂ ಮತ್ತು ಸಾಕ್ಸ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸಂಖ್ಯೆ: ಇಡಿ 97 ಯೋಯೋಕ 2017 ದಿನಾಂಕ: 22-05-2017.
2. ನಮ್ಮ ಕಛೇರಿ ಸುತ್ತೋಲೆ ಸಂಖ್ಯೆ: :ಸಿಪಿಇ(2)/ಪಾದರಕ್ಷೆ (ಷೂ)-02/2017-18 ದಿನಾಂಕ:27.05.2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2017-18ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ನಡೆಸಲ್ಪಡುವ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಷೂ ಮತ್ತು ಎರಡು ಜೊತೆ ಸಾಕ್ಸ್ ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈಗಾಗಲೇ ಉಲ್ಲೇಖ(1)ರನ್ವಯ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಅದರಂತೆ ಉಲ್ಲೇಖ (2)ರ ಸುತ್ತೋಲೆಯಲ್ಲಿ ಯಾವ ರೀತಿ ಖರೀದಿ ಮಾಡಬೇಕೆಂದು ನಿಯಮ ಮತ್ತು ಷರತ್ತುಗಳನ್ನು ಸೂಚಿಸಲಾಗಿದೆ.

ಮೇಲಿನ ಮಾನದಂಡಗಳನ್ವಯ ಖರೀಧಿಸಿದ ನಂತರ ರಾಜ್ಯದ ಕೆಲವು ಶಾಲೆಗಳಲ್ಲಿ ಅನುದಾನ ಉಳಿಕೆಯಾಗಿದೆ ಕೆಲವು ಶಾಲೆಗಳು ಮುಚ್ಚಲ್ಪಟ್ಟಿರುತ್ತವೆ ಹಾಗೂ ಕೆಲವು ಶಾಲೆಗಳಲ್ಲಿ ಶೂನ್ಯ ದಾಖಲಾತಿ ಇರುವುದರಿಂದ ಅನುದಾನವು ಉಳಿಕೆಯಾಗಿರುತ್ತದೆ. ಈ ರೀತಿ ಉಳಿಕೆಯಾಗಿರುವ ಅನುದಾನವನ್ನು ಕೆಳಗೆ ತಿಳಿಸಿರುವ ಕ್ರಮದಂತೆ ದಿನಾಂಕ: 31/10/2017ರ ಒಳಗಾಗಿ ಮಾನ್ಯ ಆಯುಕ್ತರ ಖಾತೆಗೆ ತಪ್ಪದೇ ಜಮೆ ಮಾಡುವುದು.

- ಶಾಲಾ ಮಟ್ಟದಿಂದ ಸಂಬಂಧಿಸಿದ ಸಿ.ಆರ್.ಪಿಗಳು ಉಳಿತಾಯವಾಗಿರುವ ಶೂ ಮತ್ತು ಸಾಕ್ಸ್ ಅನುದಾನವನ್ನು ಉಪನಿರ್ದೇಶಕರ ಪದನಾಮದ ಖಾತೆಗೆ ಚಕ್ ಮುಖಾಂತರ ಪಾವತಿಸುವಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮ ಕೈಗೊಳ್ಳುವುದು.
- ಎಲ್ಲಾ ತಾಲ್ಲೂಕುಗಳಿಂದ ಬಿ.ಇ.ಓ ಮುಖಾಂತರ ಈ ರೀತಿ ಬಂದ ಮೊತ್ತದ ಶಾಲಾವಾರು ಮಾಹಿತಿಯನ್ನು ಸಂಬಂಧಿಸಿದ ಉಪನಿರ್ದೇಶಕರ ಕಛೇರಿಯ ಲೆಕ್ಕಾಧೀಕ್ಷಕರು ಎಕ್ಸೆಲ್ ಶೀಟ್ ನಲ್ಲಿ ಪಡೆದು, ಚಕ್ ನಲ್ಲಿರುವ ಮೊತ್ತ ಹಾಗೂ ಎಕ್ಸೆಲ್ ಶೀಟ್ ನಲ್ಲಿ ಬಂದ ಮಾಹಿತಿಯನ್ನು ತಾಳೆಮಾಡಿ ಖಚಿತಪಡಿಸುಕೊಳ್ಳುವುದು.
- ಉಪನಿರ್ದೇಶಕರುಗಳು ತಾಳೆ ಹೊಂದಿದ ಶಾಲಾವಾರು ಎಕ್ಸೆಲ್ ಮಾಹಿತಿಯನ್ನು ಆಯುಕ್ತರ ಕಛೇರಿಗೆ ಕಳುಹಿಸಿ, ನಂತರ ಮೊತ್ತವನ್ನು ಆಯುಕ್ತರ ಖಾತೆಗೆ ದಿನಾಂಕ:31/10/2017ರ ಆರ್.ಟಿ.ಜಿ.ಎಸ್ ಮಾಡಲು ತಿಳಿಸಿದೆ.
- ಆಯುಕ್ತರ ಖಾತೆ ವಿವರ:-

| | |
|---|---|
| ಹೆಸರು | :"Commissioner for Public Instruction" |
| ಖಾತೆ ಸಂಖ್ಯೆ | :54034600713 |
| ಐ.ಎಫ್.ಎಸ್.ಸಿ | :SBIN0040526 |
| ವಿಳಾಸ | :M S Building branch, Bangalore-01 |

➤ ಶೂ ಮತ್ತು ಸಾಕ್ಸ್ ಖರೀದಿಗೆ ಕೊರತೆಯಾಗಿರುವ ಶಾಲೆಗಳಿಗೆ ಅನುದಾನವನ್ನು ನಿಮ್ಮಿಂದ ಬಂದ ಮೊತ್ತದಿಂದ ಬಿಡುಗಡೆಮಾಡಬೇಕಾಗಿರುವ ಹಿನ್ನಲೆಯಲ್ಲಿ ವಿಳಂಬಕ್ಕೆ ಅವಕಾಶ ಮಾಡದೆ ದಿನಾಂಕ:31/10/2017ರ ಒಳಗಾಗಿ ತಪ್ಪದೇ ಆರ್.ಟಿ.ಜಿ.ಎಸ್ ಮಾಡಲು ಮತ್ತೊಮ್ಮೆ ತಿಳಿಸಿದೆ. ತಪ್ಪಿದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಬಂಧಿಸಿದ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. (ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಬಿ.ಕೆ.ಬಸವರಾಜ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು (ಕೇಂದ್ರ ಕಛೇರಿ), ಉಪನಿರ್ದೇಶಕರುಗಳಿಂದ ಬಂದ ಮಾಹಿತಿಗೆ ಸೂಕ್ತ ಲೆಡ್ಜರ್ ನಿರ್ವಹಿಸುವುದು(ಜಿಲ್ಲಾವಾರು/ಶಾಲಾವಾರು).

ಪ್ರತಿಯನ್ನು:

1. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗ ಮಾಹಿತಿಗಾಗಿ ಮತ್ತು ಸೂಕ್ತ ಮೇಲ್ವಿಚಾರಣೆಗಾಗಿ ಕಳುಹಿಸಿದೆ.
2. ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು, ಮೈಸೂರು, ಗುಲ್ಬರ್ಗ ಮತ್ತು ಬೆಳಗಾಂ ವಿಭಾಗ ಇವರ ಮಾಹಿತಿಗಾಗಿ ಮತ್ತು ಸೂಕ್ತ ಮೇಲ್ವಿಚಾರಣೆಗಾಗಿ ಕಳುಹಿಸಿದೆ.
3. ಕ.ಪ್ರ